# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## Spl.C.78/2019

**P.W.-06**
**C.W.-16**

| | | |
|---|---|---|
| ಹೆಸರು | : | Gajendra Prasad |
| ತಂದೆಯ ಹೆಸರು | : | G.L.Shivegowda |
| ವಯಸ್ಸು | : | 53 ವರ್ಷ |
| ಉದ್ಯೋಗ | : | ACP, Vijayanagar P.S., Mysuru |
| ವಾಸಸ್ಥಳ | : | Mysuru |

**ದಿನಾಂಕಃ10.04.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**

1. ನಾನು 14.04.2016 ರಿಂದ ದಿಃ09.01.2018 ರವರೆಗೆ ಮೈಸೂರಿನ ಎಸಿಬಿ ಪೊ.ಠಾಣೆಯ ಪೊಲೀಸ್ ಉಪಾಧೀಕ್ಷನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ದಿಃ14.07.2017 ರ ಮಧ್ಯಾಹ್ನ 2.00 ಗಂಟೆಯ ಸಮಯದಲ್ಲಿ ಈ ಪ್ರಕರಣದ ಚಾಸಾ–1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ನಮ್ಮ ಠಾಣಾ ಮೊ.ಸಂ.9/2017 ರ ಅಡಿಯಲ್ಲಿ ಕಲಂ.7 ಪಿಸಿ ಕಾಯ್ದೆ ಅಡಿಯಲ್ಲಿ ಮೊಕದ್ದಮೆ ದಾಖಲಿಸಿ ಪ್ರ.ಮ.ವ.ವನ್ನು ಸೀಲ್ಡ್ ಕವರಿನಲ್ಲಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ.

3. ನಿಪಿ–2 ದೂರಿನ ಮೇಲೆ ಸಾಕ್ಷಿ, ಮೊಕದ್ದಮೆಯನ್ನು ದಾಖಲಿಸಿದ ಬಾಬ್ತು ಹಿಂಬರಹ ಮತ್ತು ಸಹಿಯನ್ನು ಗುರುತಿಸಿದ್ದು, ಸದರಿ ಭಾಗವನ್ನು ನಿಪಿ–2(ಬಿ) ಎಂದು ಗುರುತು ಪಡಿಸಿಕೊಳ್ಳಲಾಯಿತು. ಪ್ರ.ಮ.ವ.ವನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ನಿಪಿ–22 ಎಂತಲೂ, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ–22(ಎ) ಎಂತಲೂ ಗುರುತು ಪಡಿಸಿಕೊಳ್ಳಲಾಯಿತು.

4. ಚಾಸಾ-1 ರವರು ತಮ್ಮ ಲಿಖಿತ ದೂರಿನಲ್ಲಿ ಹಳೆಕೆಸರೇ ಗ್ರಾಮದ ಸರ್ವೇ ನಂ.610/4 ಮತ್ತು 610/6 ರಲ್ಲಿನ 1 ಎಕರೆ 30 ಗುಂಟೆ ಜಮೀನನ್ನು ಭೂಪರಿವರ್ತನೆ ಮಾಡುವ ಬಗ್ಗೆ ಮೈಸೂರಿನ ಕಾರ್ಮೆಲ್ ಕಾನ್ವೆಂಟಿನ ಸಿಸ್ಟರ್ ಸುಪೇರಿಯರ್ ಆದ ತೆರೆಸಾರವರು ಮೈಸೂರು ಜಿಲ್ಲಾಧಿಕಾರಿ ಕಛೇರಿಗೆ ಅರ್ಜಿಯನ್ನು ಭೂಪರಿವರ್ತನೆಗಾಗಿ ನೀಡಿದ್ದು, ಈ ಕೆಲಸವನ್ನು ತೆರೆಸಾರವರು ದೂರುದಾರರಿಗೆ ನಿರ್ವಹಿಸಲು ನೀಡಿದ್ದು, ಅದರಂತೆ ದೂರುದಾರರು ಆರೋಪಿಯನ್ನು ಈ ಸಂಬಂಧ ಭೇಟಿ ಮಾಡಿ ವಿಚಾರಿಸಲಾಗಿ ಸದರಿ ಜಮೀನಿನ ಭೂಪರಿವರ್ತನೆ ಮಾಡಲು ರೂ.55,000/- ಹಣಕ್ಕಾಗಿ ಬೇಡಿಕೆ ಇಟ್ಟು, ರೂ.15,000/-ಗಳನ್ನು ಪಡೆದು, ಉಳಿದ ರೂ.40,000/- ಲಂಚಕ್ಕಾಗಿ ಒತ್ತಾಯಿಸಿರುವುದಾಗಿ ತಿಳಿಸಿದ್ದರು. ಸದರಿ ದೂರನ್ನು ಟೈಪ್ ಮಾಡಿ ದೂರುದಾರರು ನೀಡಿದ್ದರು.

5. ನಂತರ ಪ್ರಕರಣದ ತನಿಖೆಗಾಗಿ, ಸಿಬ್ಬಂದಿಗಳನ್ನು ನಿಯೋಜಿಸಲು ಕೋರಿ ನಾನು, ಪ್ರಾಚಾರ್ಯರು, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯವರಿಗೆ ಮತ್ತು ಮುಖ್ಯೋಪಾಧ್ಯಯರು, ಸರ್ಕಾರಿ ಹಿ.ಪ್ರಾ.ಶಾಲೆ,ಎನ್.ಆರ್.ಮೊಹಲ್ಲಾ, ಮೈಸೂರು,ರವರಿಗೆ ಪತ್ರಿಸಿದೆ. ಸದರಿ ಪತ್ರಗಳನ್ನು ನಾನೀಗ ನೋಡುತ್ತಿದ್ದೇನೆ. ಸದರಿ ಪತ್ರಗಳನ್ನು ಅನುಕ್ರಮವಾಗಿ ನಿಪಿ-23 ಮತ್ತು 24 ಎಂತಲೂ, ಅವುಗಳ ಮೇಲೆ ಸಾಕ್ಷಿ ಗುರುತಿಸಿದ ತಮ್ಮ ಸಹಿಯನ್ನು ನಿಪಿ-23(ಎ) ಮತ್ತು 24(ಎ) ಎಂತಲೂ ಗುರುತು ಪಡಿಸಿಕೊಳ್ಳಲಾಯಿತು.

6. ಅದರಂತೆ ಚಾಸಾ-2 ಮತ್ತು 3 ರವರು ಮಧ್ಯಾಹ್ನ 3.30 ಕ್ಕೆ ನಮ್ಮ ಠಾಣೆಗೆ ಬಂದು ನನ್ನ ಮುಂದೆ ವರದಿ ಮಾಡಿಕೊಂಡಿರುತ್ತಾರೆ. ಸದರಿ ಸಾಕ್ಷಿದಾರರನ್ನು ದೂರುದಾರರಿಗೆ ಮತ್ತು ಸಿಬ್ಬಂದಿಯವರಿಗೆ ಪರಿಚಯಿಸಿರುತ್ತೇನೆ. ನಂತರ ದೂರಿನ ಬಗ್ಗೆ ತಿಳಿಸಿ ಸದರಿಯವರಿಗೆ ದೂರನ್ನು ಓದಲು ನೀಡಿರುತ್ತೇನೆ. ಸದರಿಯವರು ದೂರನ್ನು ಓದಿಕೊಂಡು ತಿಳಿದುಕೊಂಡಿರುತ್ತಾರೆ ಮತ್ತು ಸದರಿ ದೂರಿನಲ್ಲಿದ್ದ ಅಂಶಗಳ ಬಗ್ಗೆ ಪಿರ್ಯಾದುದಾರರಿಂದ ಖಚಿತ ಪಡಿಸಿಕೊಂಡಿರುತ್ತಾರೆ. ನಂತರ ಚಾಸಾ-2 ರವರನ್ನು 1 ನೇ ಪಂಚಸಾಕ್ಷಿಯಾಗಿಯೂ ಮತ್ತು ಚಾಸಾ-3 ರವರನ್ನು 2 ನೇ ಪಂಚಸಾಕ್ಷಿ ಎಂತಲೂ ನಾನು ಹೆಸರಿಸಿರುತ್ತೇನೆ. ನಂತರ ದೂರುದಾರರು ಆರೋಪಿಗೆ ಲಂಚದ ಹಣವನ್ನು ನೀಡಲು ತಂದಿದ್ದನ್ನು ಹಾಜರು ಪಡಿಸಲು ತಿಳಿಸಿದೆ. ಅದರಂತೆ ದೂರುದಾರರು ತಾನು ತಂದಿದ್ದ ರೂ.500/- ಮುಖಬೆಲೆಯ 32 ನೋಟುಗಳನ್ನು ಮತ್ತು ರೂ.2000/- ಮುಖಬೆಲೆಯ 7 ನೋಟುಗಳನ್ನು ಹಾಜರು ಪಡಿಸಿದರು. ಸದರಿ ಹಣವನ್ನು ನಾನು ಪಂಚಸಾಕ್ಷಿ-1 ಅಂದರೆ ಚಾಸಾ-2 ರವರಿಗೆ ನೀಡಿ, ನೋಟುಗಳನ್ನು ಪರಿಶೀಲಿಸಲು ತಿಳಿಸಿದೆ. ಅದರಂತೆ ಅವರು

ಆ ನೋಟುಗಳನ್ನು ಪರಿಶೀಲಿಸಿ, ಆ ನೋಟುಗಳ ಸಂಖ್ಯೆಗಳನ್ನು ಓದಿ ಹೇಳಿದಂತೆ, ಚಾಸಾ–3 ರವರು ಒಂದು ಪ್ರತ್ಯೇಕ ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ಸದರಿ ದಾಖಲಾತಿಯನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ–18 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಸದರಿ ದಾಖಲಾತಿಯ ಮೇಲಿರುವ ನನ್ನ ಸಹಿಯನ್ನು ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ತಮ್ಮ ಸಹಿಯನ್ನು ನಿಪಿ–18(ಸಿ) ಎಂದು ಗುರುತು ಪಡಿಸಿಕೊಳ್ಳಲಾಯಿತು.

7. ನಂತರ ನನ್ನ ಸೂಚನೆಯ ಮೇರೆಗೆ ಚಾಸಾ–9 ರವರು ಸದರಿ ನೋಟುಗಳ ಎರಡು ಬದಿಗೆ ಫಿನಾಪ್ತಲೀನ್ ಪೌಡರನ್ನು ಲೇಪಿಸಿರುತ್ತಾರೆ. ನಂತರ ಸದರಿ ನೋಟುಗಳನ್ನು ಪುನಃ ಚಾಸಾ–2 ರವರಿಗೆ ನೀಡಿ ಮತ್ತೊಮ್ಮೆ ಪರಿಶೀಲಿಸಲು ತಿಳಿಸಿದೆ. ಅವರು ಪರಿಶೀಲಿಸಿದರು. ನಂತರ ಅವರಿಂದ ಆ ನೋಟುಗಳನ್ನು ಚಾಸಾ–1 ರವರ ಶರ್ಟಿನ ಎಡಜೇಬಿನಲ್ಲಿ ಇಡಲು ತಿಳಿಸಿದೆ. ಅದರಂತೆ ಅವರು ಇರಿಸಿದರು. ಉಳಿದಿದ್ದ ಫಿನಾಪ್ತಲೀನ್ ಪೌಡರನ್ನು ಒಂದು ಪ್ರತ್ಯೇಕ ಕವರಿನಲ್ಲಿ ಹಾಕಿ ಅಮಾನತು ಪಡಿಸಿಕೊಂಡಿರುತ್ತೇನೆ. ಅದನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಮು.ಮಾ.2 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಸದರಿ ಕವರಿನ ಮೇಲೆ ನನ್ನ ಹಾಗೂ ಪಂಚರ ಸಹಿಗಳು ಇವೆ. ಅವುಗಳನ್ನು ನೋಡಿ ಗುರುತಿಸುತ್ತೇನೆ.

8. ನಂತರ ನನ್ನ ಸೂಚನೆಯ ಮೇರೆಗೆ ಚಾಸಾ–17 ರವರು ಒಂದು ಗಾಜಿನ ಬೌಲಿನಲ್ಲಿ ಸೋಡಿಯಂ ಕಾರ್ಬೋನೆಟ್ ದ್ರಾವಣವನ್ನು ತಯಾರಿಸಿದರು. ಸದರಿ ಸೋಡಿಯಂ ಕಾರ್ಬೋನೇಟ್ ಪೌಡರನ್ನು ಸ್ಯಾಂಪಲಿಗಾಗಿ ಒಂದು ಪ್ರತ್ಯೇಕ ಕವರಿನಲ್ಲಿ ಹಾಕಿ ಅಮಾನತು ಪಡಿಸಿಕೊಂಡಿರುತ್ತೇನೆ. ಅದನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಮು.ಮಾ.13 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಸದರಿ ಕವರಿನ ಮೇಲೆ ನನ್ನ ಹಾಗೂ ಪಂಚರ ಸಹಿಗಳು ಇವೆ. ಅವುಗಳನ್ನು ನೋಡಿ ಗುರುತಿಸುತ್ತೇನೆ. ನಂತರ ಚಾಸಾ–2 ರವರ ಎರಡು ಕೈಗಳನ್ನು ಸದರಿ ದ್ರಾವಣದಲ್ಲಿ ಅದ್ದಿಸಿದಾಗ, ಆ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಒಂದು ಪ್ರತ್ಯೇಕ ಗಾಜಿನ ಬಾಟಲಿಯಲ್ಲಿ ಶೇಖರಿಸಿ ಸೀಲು ಮಾಡಿರುತ್ತೇನೆ. ಅದನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಅದರ ಮೇಲೆ ನನ್ನ ಹಾಗೂ ಪಂಚರ ಸಹಿಗಳು ಇವೆ. ಅವುಗಳನ್ನು ನೋಡಿ ಗುರುತಿಸುತ್ತೇನೆ.

9. ನಂತರ ದೂರುದಾರರನ್ನು, ಆರೋಪಿ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಬಗ್ಗೆ ಯಾವುದಾದರೂ ಸಾಕ್ಷ್ಯ ಇದೆಯೇ ಎಂದು ಕೇಳಲಾಗಿ, ಆತ ತನ್ನ ಹಾಗೂ ಆರೋಪಿಯೊಂದಿಗೆ ಆದ ಸಂಭಾಷಣೆಯನ್ನು ತಮ್ಮ

ಮೊಬೈಲಿನಲ್ಲಿ ರೆಕಾರ್ಡ್ ಮಾಡಿರುವ ಬಗ್ಗೆ ತಿಳಿಸಿ, ಮೊಬೈಲಿನ ಮೆಮೊರಿ ಚಿಪ್ಪನ್ನು ಹಾಜರು ಪಡಿಸಿದರು. ಅದನ್ನು ನಾನು ಒಂದು ಪ್ರತ್ಯೇಕ ಕವರಿನಲ್ಲಿ ಹಾಕಿ ಸೀಲು ಮಾಡಿರುತ್ತೇನೆ. ಅದನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಮು.ಮಾ.5 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಸದರಿ ಕವರಿನ ಮೇಲೆ ನನ್ನ ಹಾಗೂ ಪಂಚರ ಸಹಿಗಳು ಇವೆ. ಅವುಗಳನ್ನು ನೋಡಿ ಗುರುತಿಸುತ್ತೇನೆ. ನಂತರ ಸದರಿ ಮೆಮೊರಿ ಚಿಪ್ಪನ್ನು ಕಾರ್ಡ್ ರೀಡರ್ ಗೆ ಅಳವಡಿಸಿ, ಕಂಪ್ಯೂಟರ್ ಮೂಲಕ ಅದರಲ್ಲಿದ್ದಂತಹ ದೂರುದಾರರು ಮತ್ತ ಆರೋಪಿ ನಡುವೆ ಆದಂತಹ ಸಂಭಾಷಣೆಯನ್ನು ಆಲಿಸಲಾಯಿತು. ಆ ಸಂಭಾಷಣೆ ಒಟ್ಟು 2 ನಿಮಿಷ 36 ಸೆಕೆಂಡುಗಳ ಕಾಲ ನಡೆದಿತ್ತು. ಆ ಸಂಭಾಷಣೆಯನ್ನು ಪ್ರಾಯೋಗಿಕ ಪಂಚನಾಮೆಯನ್ನು ನಡೆಸಿದ ಕಾಲಕ್ಕೆ ಅಳವಡಿಸಿಕೊಳ್ಳಲಾಯಿತು. ನಂತರ ಆ ಸಂಭಾಷಣೆಯನ್ನು 2 ಸಿಡಿಗಳಿಗೆ ಲ್ಯಾಪ್ ಟಾಪ್ ಮೂಲಕ ವರ್ಗಾಯಿಸಲಾಯಿತು. ನಂತರ ಅದನ್ನು CD Mailer ಗೆ ಹಾಕಿ, ಅಂಟಿಸಿ ಅವುಗಳನ್ನು ಆರ್ಟಿಕಲ್ 4 ಮತ್ತು 4(ಎ) ಎಂದು ಗುರುತು ಪಡಿಸಿಕೊಳ್ಳಲಾಯಿತು. ಅವುಗಳ ಮೇಲೆ ವಿವರಗಳನ್ನು ಬರೆದ ಲೇಬಲನ್ನು ಅಂಟಿಸಿ ನಾನು ಮತ್ತು ಪಂಚರು ಸಹಿ ಹಾಕಿರುತ್ತೇವೆ. ನಂತರ ಮೇಲ್ಕಂಡ ಎಲ್ಲಾ ಆರ್ಟಿಕಲುಗಳನ್ನು ಠಾಣೆಯಲ್ಲಿ ಸುರಕ್ಷಿತವಾಗಿ ಇಟ್ಟು, ನಾನು, ಪಂಚರು ಮತ್ತು ಸಿಬ್ಬಂದಿಗಳು ನಮ್ಮ ಕೈಗಳನ್ನು ತೊಳೆದುಕೊಂಡೆವು. ನಮ್ಮ ಬಳಿ ಆರೋಪಿಗೆ ತೊಂದರೆಯಾಗುವಂತಹ ಯಾವುದೇ ವಸ್ತುಗಳು ಇರುವುದಿಲ್ಲ ಎನ್ನುವುದನ್ನು ಪಿರ್ಯಾದುದಾರರಿಂದ ಖಾತ್ರಿ ಪಡಿಸಿಕೊಂಡೆವು. ನಂತರ ಪಿರ್ಯಾದುದಾರರಿಗೆ ಒಂದು ಡಿಜಿಟಲ್ ವಾಯ್ಸ್ ರೆಕಾರ್ಡರನ್ನು ನೀಡಿ, ಅದನ್ನು ಉಪಯೋಗಿಸುವ ಬಗ್ಗೆ ತಿಳಿಸಿ, ಆರೋಪಿಯನ್ನು ಭೇಟಿ ಮಾಡಿದ ಸಂದರ್ಬದಲ್ಲಿ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳುವಂತೆ ಮತ್ತು ಆರೋಪಿ ಲಂಚದ ಹಣಕ್ಕಾಗಿ ಒತ್ತಾಯಿಸಿದಾಗ ಮಾತ್ರ, ಫಿನಾಪ್ತಲೀನ್ ಲೇಪಿತ ಹಣವನ್ನು ನೀಡಬೇಕೆಂದು, ಅದುವರೆಗೆ ಆ ಹಣವನ್ನು ಮುಟ್ಟಬಾರದೆಂದು, ಆರೋಪಿ ಲಂಚದ ಹಣವನ್ನು ಸ್ವೀಕರಿಸಿದ ನಂತರ ಎಲ್ಲಿ ಇಟ್ಟುಕೊಳ್ಳುತ್ತಾರೆ ಎನ್ನುವುದನ್ನು ಗಮನಿಸಿ, ಹೊರಗಡೆ ಬಂದು ಪಿರ್ಯಾದುದಾರರು ತನ್ನ ಬಲಕೈನಿಂದ ತಲೆಯನ್ನು ಸವರಿಕೊಳ್ಳುವ ಮೂಲಕ ನಮಗೆ ಸೂಚನೆ ನೀಡಬೇಕೆಂದು ತಿಳಿಸಿದೆ. ನಂತರ 2 ನೇ ಪಂಚಸಾಕ್ಷಿಗೆ, ಪಿರ್ಯಾದದಾರ ಆರೋಪಿಯನ್ನು ಭೇಟಿ ಮಾಡಲು ಹೋಗುವ ಸಂದರ್ಭದಲ್ಲಿ ತಾವು ಕೂಡ ಪಿರ್ಯಾದುದಾರರ ಜೊತೆಯಲ್ಲೇ ಹೋಗಬೇಕು ಎಂದು ಮತ್ತು ಆರೋಪಿ ಹಾಗೂ ಪಿರ್ಯಾದುದಾರರ ನಡುವೆ ನಡೆಯುವ ಸಂಭಾಷಣೆಯನ್ನು ಕೇಳಿಸಿಕೊಳ್ಳಬೇಕು ಮತ್ತು ಆರೋಪಿ ಪಿರ್ಯಾದುದಾರರಿಂದ ಪಡೆದ ಲಂಚದ ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆಂದು ಗಮನಿಸಬೇಕೆಂದು ತಿಳಿಸಿರುತ್ತೇನೆ ಮತ್ತು ಈ ವಿಚಾರವನ್ನು, ಈ ಮೇಲ್ಕಂಡ ವಿಧ್ಯಮಾನಗಳೆಲ್ಲವೂ ಮುಗಿಯುವವರೆಗೂ

ಗೌಪ್ಯವಾಗಿಡಬೇಕೆಂದು ತಿಳಿಸಿರುತ್ತೇನೆ. ಮೇಲ್ಕಂಡ ನಡವಳಿಕೆಗಳು ನಡೆಯುತ್ತಿದ್ದ ಕಾಲಕ್ಕೆ ಛಾಯಚಿತ್ರಗಳನ್ನು ತೆಗೆಯಲಾಯಿತು. ಅವುಗಳನ್ನು ನಾನೀಗ ನೋಡುತ್ತಿದ್ದೇನೆ. ಅವುಗಳನ್ನು ಈಗಾಗಲೇ ನಿಪಿ-3 ರಿಂದ 7 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಈ ನಡವಳಿಕೆಗಳ ಬಾಬ್ತು ಪ್ರಾಯೋಗಿಕ ಪಂಚನಾಮೆಯನ್ನು ಮಧ್ಯಾಹ್ನ 3.40 ರಿಂದ 6.00 ಗಂಟೆಯವರೆಗೆ ಪಂಚರ ಸಮಕ್ಷಮ ಜರುಗಿಸಲಾಯಿತು. ಇದನ್ನು ಚಾಸಾ-13 ರವರಿಂದ ಲ್ಯಾಪ್ ಟಾಪ್ ಮೂಲಕ ಬೆರಳಚ್ಚು ಮಾಡಿಸಲಾಯಿತು. ಸದರಿ ಮಹಜರ್ ಮೇಲೆ ನನ್ನ ಸಹಿ ಇರುತ್ತದೆ. ಪ್ರಾಯೋಗಿಕ ಮಹಜರನ್ನು ಈಗಾಗಲೇ ನಿಪಿ-13 ಎಂದು ಗುರುತು ಪಡಿಸಿಕೊಳ್ಳಲಾಗಿದ್ದು, ಅದರ ಮೇಲೆ ಸಾಕ್ಷಿ ಗುರುತಿಸಿದ ತಮ್ಮ ಸಹಿಯನ್ನು ನಿಪಿ-13(ಸಿ) ಎಂದು ಗುರುತು ಪಡಿಸಿಕೊಳ್ಳಲಾಯಿತು.

10. ಚಾಸಾ-1 ರವರು ದೂರನ್ನು ನೀಡುವ ಕಾಲದಲ್ಲಿ ಸಿಸ್ಟರ್ ಸುಪೆರಿಯರ್ ತೆರೆಸಾರವರು ನೀಡಿದಂತಹ ಸಾಮಾನ್ಯ ಅಧಿಕಾರ ಪತ್ರವನ್ನು ಸಹ ಹಾಜರು ಪಡಿಸಿದ್ದರು. ಅದನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ-1 ಎಂದು ಗುರುತು ಪಡಿಸಿಕೊಳ್ಳಲಾಗಿದೆ.

11. ದಿಃ14.07.2017 ರ ಸಂಜೆ 6.20 ಸಮಯಕ್ಕೆ, ಪಂಚಸಾಕ್ಷಿದಾರರು ಮತ್ತು ಎಸಿಬಿ ಸಿಬ್ಬಂದಿಯೊಂದಿಗೆ ನಾನು ಇಲಾಖಾ ವಾಹನಗಳಲ್ಲಿ ಮೈಸೂರಿನ ನಜರಬಾದ್ ತಾಲ್ಲೂಕು ಕಛೇರಿ ಬಳಿಯ ರಸ್ತೆಯ ಬಳಿಗೆ ಸಂಜೆ 6.30 ರ ಸಮಯಕ್ಕೆ ಬಂದು ತಲುಪಿದೆವು. ನಂತರ ಚಾಸಾ-1 ಮತ್ತು 3 ರವರು ನಾನು ಪ್ರಾಯೋಗಿಕ ಪಂಚನಾಮೆಯ ಕಾಲದಲ್ಲಿ ನೀಡಿದ ಸೂಚನೆಗಳನ್ನು ಮತ್ತೊಮ್ಮೆ ತಿಳಿಸಿ, ಆರೋಪಿತನನ್ನು ಭೇಟಿ ಮಾಡಲು ಕಳುಹಿಸಿಕೊಟ್ಟೆ

12. ಅವರು ಮುಂದೆ ಹೋದ ನಂತರ ನಾನು, ಚಾಸಾ-2 ಮತ್ತು ನಮ್ಮ ಸಿಬ್ಬಂದಿ ಹಿಂಬಾಲಿಸಿಕೊಂಡು ಹೋಗಿ ಮಿನಿ ವಿಧಾನಸೌಧದಲ್ಲಿರುವ ತಾಲ್ಲೂಕು ಕಛೇರಿಯ ನೆಲಮಹಡಿ ರೂಂ.8 ರ ಬಳಿ ನಿಂತೆವು. ಚಾಸಾ-1 ಮತ್ತು 3 ರವರು ಭೂಮಿ ಕೇಂದ್ರದ ಕೊಠಡಿಯೊಳ್ಳಕೆ ಹೋದರು, ಆಗ ಸಂಜೆ 6.35 ಗಂಟೆಯಾಗಿತ್ತು. ಸುಮಾರು 6.55 ರ ಸಮಯಕ್ಕೆ ಪಿರ್ಯಾದಿ ಮತ್ತು ಚಾಸಾ-3 ರವರು ಆರೋಪಿಯ ಕಛೇರಿಯಿಂದ ಹೊರ ಬಂದು, ಪಿರ್ಯಾದುದಾರ ತನ್ನ ಬಲಗೈನಿಂದ ತಲೆಯನ್ನು ಸವರಿಕೊಳ್ಳುವ ಮೂಲಕ ನನಗೆ ಸೂಚನೆಯನ್ನು ನೀಡಿದರು. ಆಗ ನಾನು ಮತ್ತು ಸಿಬ್ಬಂದಿ ಹಾಗೂ ಚಾಸಾ-2 ಪಿರ್ಯಾದಿಯ ಬಳಿ ಹೋಗಿ ವಿಚಾರಿಸಲಾಗಿ, ಪಿರ್ಯಾದಿ, ಆರೋಪಿ ತನ್ನಿಂದ ರೂ.30,000/- ಹಣವನ್ನು ಪಡೆದು ತನ್ನ ಪ್ಯಾಂಟಿನ ಎಡಜೇಬಿಗೆ ಇಟ್ಟುಕೊಂಡು ತಮ್ಮ ಕೊಠಡಿಗೆ ಹೋದರು ಎಂದು ತಿಳಿಸಿದರು ಮತ್ತು ತನ್ನ ಹಾಗೂ ಆರೋಪಿಯ

ನಡುವೆ ನಡೆದ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡಿರುತ್ತೇನೆ ಎಂದು ತಿಳಿಸಿ, ವಾಯ್ಸ್ ರೆಕಾರ್ಡರನ್ನು ನನಗೆ ನೀಡಿದರು.

13. ನಂತರ ದೂರುದಾರರು ಮತ್ತು ಚಾಸಾ-3 ನಮ್ಮನ್ನು ಆರೋಪಿಯಿದ್ದ ಕೊಠಡಿಗೆ ಕರೆದುಕೊಂಡು ಹೋಗಿ, ಆರೋಪಿಯನ್ನು ತೋರಿಸಿದರು. ನಂತರ ಚಾಸಾ-12 ರವರು ಆರೋಪಿಯ ಬಲಗೈಯನ್ನು ಮತ್ತು ಚಾಸಾ-9 ರವರು ಆರೋಪಿಯ ಎಡಗೈಯನ್ನು ಹಿಡಿದುಕೊಂಡರು. ನಂತರ ಆರೋಪಿಗೆ ನಾನು ನನ್ನ ಗುರುತಿನ ಚೀಟಿಯನ್ನು ತೋರಿಸಿ, ಪರಿಚಯಿಸಿಕೊಂಡೆ. ಪಂಚರು ಹಾಗೂ ಎಸಿಬಿ ಸಿಬ್ಬಂದಿಯವರನ್ನೂ ಸಹ ಪರಿಚಯಿಸಿ, ತನಿಖೆಗೆ ಸಹಕರಿಸುವಂತೆ ಸೂಚಿಸಿದೆ. ನಂತರ ಆರೋಪಿಯ ಹೆಸರು ಮತ್ತು ವಿಳಾಸವನ್ನು ಪಡೆದೆ ಮತ್ತು ಆತನನ್ನು ನನ್ನ ವಶಕ್ಕೆ ಪಡೆದುಕೊಂಡೆ. ಆಗ ಸಮಯ ರಾತ್ರಿ 7.25 ಆಗಿತ್ತು.

14. ನಂತರ ನಾನು ಚಾಸಾ-3 ರವರನ್ನು ಘಟನೆಯ ಕುರುತು ಕೇಳಲಾಗಿ, ಪಿರ್ಯಾದುದಾರರು ಹೇಳಿರುವುದು ಸರಿ ಇದೆ. ಆರೋಪಿಯು ಜಮೀನಿನ ಭೂಪರಿವರ್ತನೆಯ ವರದಿಯನ್ನು ನೀಡಲು ರೂ.40,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟು, ರೂ.30,000/- ಲಂಚದ ಹಣವನ್ನು, ತನ್ನ ಕೊಠಡಿಯಿಂದ ಹೊರಗೆ ಬಂದು, ದೂರುದಾರರಿಂದ ಪಡೆದುಕೊಂಡು, ಆದಷ್ಟು ಬೇಗ ವರದಿಯನ್ನು ನೀಡುವುದಾಗಿ ತಿಳಿಸಿ ತನ್ನ ಕೊಠಡಿಗೆ ಹೋಗಿರುತ್ತಾರೆ ಎಂದು ತಿಳಿಸಿದರು. ನಂತರ ನಾವುಗಳು ನಮ್ಮ ಅಂಗಶೋಧನೆಯನ್ನು ಮಾಡಿಕೊಂಡೆವು. ನಂತರ ಚಾಸಾ-11 ರವರು ನನ್ನ ಸೂಚನೆಯ ಮೇರೆಗೆ ಎರಡು ಗಾಜಿನ ಬೌಲಿನಲ್ಲಿ ಸೋಡಿಯಂ ಕಾರ್ಬೋನೆಟ್ ದ್ರಾವಣವನ್ನು ತಯಾರಿಸಿದರು. ನಂತರ ಎರಡು ಬೌಲುಗಳಿಂದ ಸ್ವಲ್ಪ ದ್ರಾವಣವನ್ನು ಮಾದರಿಗಾಗಿ ಒಂದು ಪ್ರತ್ಯೇಕ ಬಾಟಲಿನಲ್ಲಿ ಶೇಖರಿಸಿ, ಸೀಲು ಮಾಡಿ X ಎಂಬ ಇಂಗ್ಲಿಷ್ ಅಕ್ಷರದ ಮುದ್ರೆಯನ್ನು ಒತ್ತಲಾಯಿತು. ಅದನ್ನು ಆರ್ಟಿಕಲ್ 6 ಎಂದು ಗುರುತಿಸಲಾಯಿತು. ಅದನ್ನು ನಾನೀಗ ನೋಡುತ್ತಿದ್ದೇನೆ. ಸದರಿ ದ್ರಾವಣವಿರುವ ಬಾಟಲನ್ನು ಈಗಾಗಲೇ ಮು.ಮಾ.6 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಅದರ ಮೇಲೆ ನನ್ನ ಹಾಗೂ ಪಂಚರ ಸಹಿ ಇರುವ ಚೀಟಿ ಇರುತ್ತದೆ.

15. ನಂತರ ಎರಡು ಬೌಲುಗಳಲ್ಲಿ ಉಳಿದಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಆರೋಪಿಯ ಎರಡು ಕೈಗಳನ್ನು ಪ್ರತ್ಯೇಕವಾಗಿ ಅದ್ದಿಸಿ ತೊಳೆಸಿದಾಗ, ಆತನ ಬಲಗೈಯನ್ನು ಅದ್ದಿಸಿದ ದ್ರಾವಣದಲ್ಲಿ ಯಾವುದೇ ಬದಲಾವಣೆ ಆಗಿರುವುದಿಲ್ಲ. ಅದನ್ನು ಒಂದು ಬಾಟಲಿನಲ್ಲಿ ಶೇಖರಿಸಿ X ಎಂಬ ಇಂಗ್ಲಿಷ್ ಅಕ್ಷರದ ಮುದ್ರೆಯನ್ನು ಒತ್ತಲಾಯಿತು. ಅದನ್ನು ಆರ್ಟಿಕಲ್ 7 ಎಂದು ಗುರುತಿಸಲಾಯಿತು. ಅದನ್ನು ನಾನೀಗ

ನೋಡುತ್ತಿದ್ದೇನೆ. ಸದರಿ ದ್ರಾವಣವಿರುವ ಬಾಟಲನ್ನು ಈಗಾಗಲೇ ಮು.ಮಾ.7 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಅದರ ಮೇಲೆ ನನ್ನ ಹಾಗೂ ಪಂಚರ ಸಹಿ ಇರುವ ಚೀಟಿ ಇರುತ್ತದೆ.

16. ನಂತರ ಆರೋಪಿಯ ಎಡಗೈ ಬೆರಳುಗಳನ್ನು ಅದ್ದಿಸಿದ ದ್ರಾವಣ ತಿಳಿಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಒಂದು ಪ್ರತ್ಯೇಕ ಬಾಟಲಿನಲ್ಲಿ ಶೇಖರಿಸಿ, X ಎಂಬ ಇಂಗ್ಲಿಷ್ ಅಕ್ಷರದ ಮುದ್ರೆಯನ್ನು ಒತ್ತಲಾಯಿತು. ಅದನ್ನು ಆರ್ಟಿಕಲ್ 8 ಎಂದು ಗುರುತಿಸಲಾಯಿತು. ಅದನ್ನು ನಾನೀಗ ನೋಡುತ್ತಿದ್ದೇನೆ. ಸದರಿ ದ್ರಾವಣವಿರುವ ಬಾಟಲನ್ನು ಈಗಾಗಲೇ ಮು.ಮಾ.8 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಅದರ ಮೇಲೆ ನನ್ನ ಹಾಗೂ ಪಂಚರ ಸಹಿ ಇರುವ ಚೀಟಿ ಇರುತ್ತದೆ.

17. ನಂತರ ಆರೋಪಿಯನ್ನು ಕುರಿತು, ಪಿರ್ಯಾದಿಯಿಂದ ಪಡೆದ ಲಂಚದ ಹಣದ ಬಗ್ಗೆ ಕೇಳಲಾಗಿ, ಆತ ತನ್ನ ಪ್ಯಾಂಟಿನ ಎಡಭಾಗದ ಜೇಬಿನಿಂದ ಲಂಚದ ಹಣವನ್ನು ಹೊರತೆಗೆದು ಹಾಜರು ಪಡಿಸಿದ. ಅದನ್ನು ಚಾಸಾ-2 ರವರಿಗೆ ನೀಡಿ, ಈಗಾಗಲೇ ಪ್ರಾಯೋಗಿಕ ಪಂಚನಾಮೆಯ ಕಾಲಕ್ಕೆ ಬರೆದುಕೊಂಡಿದ್ದ ನೋಟುಗಳ ಸಂಖ್ಯೆಗಳೊಂದಿಗೆ ಹೋಲಿಸಿ ನೋಡಲು ಸೂಚಿಸಿದಾಗ, ಚಾಸಾ-2 ಮತ್ತು 3 ರವರು ಸದರಿ ನೋಟುಗಳ ಸಂಖ್ಯೆಗಳನ್ನು ಈಗಾಗಲೇ ಪ್ರತ್ಯೇಕ ಹಾಳೆಯಲ್ಲಿ ದಾಖಲಿಸಿದ್ದ ನೋಟುಗಳ ಸಂಖ್ಯೆಗಳೊಂದಿಗೆ ಹೋಲಿಕೆ ಮಾಡಲಾಗಿ ನೋಡಲಾಗಿ, ಆ ನೋಟಿನ ನಂಬರುಗಳು ತಾಳೆಯಾದವು. ಸದರಿ ನೋಟುಗಳನ್ನು ಒಂದು ಪ್ರತ್ಯೇಕ ಕವರಿನಲ್ಲಿ ಹಾಕಿ X ಎಂಬ ಅಕ್ಷರದಿಂದ ಸೀಲು ಹಾಕಿ ನನ್ನ ಹಾಗೂ ಪಂಚರ ಸಹಿ ಇರುವ ಚೀಟಿಯನ್ನು ಹಾಕಲಾಯಿತು. ಅದನ್ನು ಆರ್ಟಿಕಲ್ 9 ಎಂದು ಗುರುತು ಪಡಿಸಿಕೊಳ್ಳಲಾಯಿತು. ಸದರಿ ನೋಟುಗಳನ್ನು ನಾನೀಗ ನೋಡುತ್ತಿದ್ದೇನೆ. ಅವುಗಳನ್ನು ಈಗಾಗಲೇ ಮು.ಮಾ.9 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಸದರಿ ಕವರು ಮೇಲೆ ಇರುವ ನನ್ನ ಹಾಗೂ ಪಂಚರ ಸಹಿ ಇರುತ್ತವೆ.

18. ನಂತರ ಆರೋಪಿಗೆ ಪ್ರತ್ಯೇಕ ಪ್ಯಾಂಟಿನ ವ್ಯವಸ್ಥೆ ಮಾಡಿ, ಆತ ಧರಿಸಿದ್ದ ಪ್ಯಾಂಟನ್ನು ಪಡೆದು ಆ ಪ್ಯಾಂಟಿನ ಎಡಭಾಗದ ಜೇಬನ್ನು ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ಅದ್ದಿಸಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಒಂದು ಪ್ರತ್ಯೇಕ ಬಾಟಲಿನಲ್ಲಿ ಶೇಖರಿಸಿ X ಎಂಬ ಇಂಗ್ಲೀಷ್ ಅಕ್ಷರದ ಮುದ್ರೆಯನ್ನು ಒತ್ತಿ, ನನ್ನ ಹಾಗೂ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಲಾಯಿತು ಮತ್ತು ಅದನ್ನು ಆರ್ಟಿಕಲ್ 11 ಎಂದು ಗುರುತು ಪಡಿಸಿಕೊಳ್ಳಲಾಗಿದೆ ಸದರಿ ದ್ರಾವಣವಿರುವ ಬಾಟಲನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಮು.ಮಾ.11 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಅದರ ಮೇಲೆ ನನ್ನ ಹಾಗೂ ಪಂಚರ ಸಹಿ

ಇರುವ ಚೀಟಿ ಇರುತ್ತದೆ. ಆರೋಪಿ ಧರಿಸಿದ್ದ ಆ ಪ್ಯಾಂಟನ್ನು ನಾನು ಅಮಾನತು ಪಡಿಸಿಕೊಂಡಿರುತ್ತೇನೆ. ಅದನ್ನು ಆರ್ಟಿಕಲ್ 12 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಸದರಿ ಪ್ಯಾಂಟನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಮು.ಮಾ.12 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಅದರ ಮೇಲೆ ನನ್ನ ಹಾಗೂ ಪಂಚರ ಸಹಿ ಇರುವ ಚೀಟಿ ಇರುತ್ತದೆ. ಅಲ್ಲಿ ಉಳಿದಿದ್ದ ಸೋಡಿಯಂ ಕಾರ್ಬೋನೆಟ್ ಧ್ರಾವಣವನ್ನು ಪ್ರತ್ಯೇಕವಾಗಿ ಶೇಖರಿಸಿ ಸೀಲು ಮಾಡಿ ಅಮಾನತು ಪಡಿಸಿಕೊಂಡಿರುತ್ತೇನೆ. ಅದನ್ನು ಆರ್ಟಿಕಲ್ 13 ಎಂದು ಗುರುತು ಪಡಿಸಿಕೊಳ್ಳಲಾಯಿತು. ಅದನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಮು.ಮಾ.13 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಅದರ ಮೇಲೆ ನನ್ನ ಹಾಗೂ ಪಂಚರ ಸಹಿ ಇರುವ ಚೀಟಿ ಇರುತ್ತದೆ.

19. ನಂತರ ಚಾಸಾ-1ರವರಿಗೆ ಆರೋಪಿಗೆ ಲಂಚದ ಹಣವನ್ನು ನೀಡುವ ಸಂದರ್ಭದಲ್ಲಿ ನಡೆದಂತಹ ಸಂಭಾಷಣೆಯ ರೆಕಾರ್ಡನ್ನು ಕೇಳಲಾಗಿ ಆತ ವಾಯ್ಸ್ ರೆಕಾರ್ಡರನ್ನು ಹಾಜರು ಪಡಿಸಿದ. ಅದನ್ನು ಲ್ಯಾಪ್ ಟಾಪಿಗೆ ಅಳವಡಿಸಿ ಕೇಳಲಾಗಿ, ಒಟ್ಟು ಮುದ್ರಿತ ಸಂಭಾಷಣೆಯ ಅವಧಿ 31 ನಿಮಿಷ 25 ಸೆಕೆಂಡ್ ಇರುತ್ತದೆ. ಈ ಸಂಭಾಷಣೆಯನ್ನು 2 ಪ್ರತ್ಯೇಕ ಸಿಡಿ ವರ್ಗಾಯಿಸಿ, ಸಿಡಿ ಮೇಲರ್ ಗೆ ಹಾಕಿ ಅಂಟಿಸಿ ಅಮಾನತು ಪಡಿಸಿಕೊಂಡಿರುತ್ತೇನೆ. ಅವುಗಳನ್ನು ನಾನೀಗ ನೋಡುತ್ತಿದ್ದೇನೆ, ಅದನ್ನು ಈಗಾಗಲೇ ಮು.ಮಾ.14 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಅದರ ಮೇಲೆ ನನ್ನ ಹಾಗೂ ಪಂಚರ ಸಹಿ ಇರುವ ಚೀಟಿ ಇರುತ್ತದೆ. ಸದರಿ ಸಂಭಾಷಣೆಯನ್ನು, ಟ್ರಾಪ್ ಮಹಜರಿನಲ್ಲಿ ಅಳವಡಿಕೊಳ್ಳಲಾಗಿದೆ. ನಂತರ ಚಾಸಾ-1ರವರು ಪ್ರಾಯೋಗಿಕ ಪಂಚನಾಮೆಯ ಕಾಲದಲ್ಲಿ ಹಾಜರು ಪಡಿಸಿದ್ದ ಮೆಮೊರಿ ಚಿಪ್ಪನ್ನು ಧ್ವನಿ ಮುದ್ರಣವನ್ನು ಚಾಸಾ-4ರವರಿಗೆ ಕೇಳಿಸಿ, ಅವರಿಂದ ಆರೋಪಿಯ ಧ್ವನಿಯನ್ನು ಗುರುತಿಸಿ ಖಚಿತ ಪಡಿಸಿಕೊಂಡಿರುತ್ತೇನೆ. ಅದನ್ನು ಟ್ರಾಪ್ ಮಹಜರಿನಲ್ಲಿ ಉಲ್ಲೇಖಿಸಿರುತ್್ತೇನೆ. ಈ ಸಂಭಾಷಣೆಯನ್ನು ಪ್ರತ್ಯೇಕ 3 ಫೈಲುಗಳಲ್ಲಿ ಮುದ್ರಿಸಿಕೊಂಡು, ಸಿಡಿಗೆ ಕಾಪಿ ಮಾಡಿಕೊಳ್ಳಲಾಯಿತು. ಅದನ್ನು ಅಮಾನತು ಪಡಿಸಿಕೊಂಡಿರುತ್ತೇನೆ. ಸದರಿ ಸಂಭಾಷಣೆಯನ್ನು ಸಹ ಟ್ರಾಪ್ ಮಹಜರಿನಲ್ಲಿ ಉಲ್ಲೇಖಿಸಲಾಗಿದೆ. ನಂತರ ಆರೋಪಿಯ ಮಾದರಿ ಧ್ವನಿಯನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಆ ಧ್ವನಿಯನ್ನು ಪ್ರತ್ಯೇಕ 3 ಫೈಲುಗಳಲ್ಲಿ ಮುದ್ರಿಸಿಕೊಂಡು ಲ್ಯಾಪ್ ಟಾಪಿಗೆ ಹಾಕಿ ಸಿಡಿಗೆ ಕಾಪಿ ಮಾಡಿಕೊಂಡಿರುತ್ತೇನೆ. ನಂತರ ಅದನ್ನು ಅಮಾನತು ಪಡಿಸಿಕೊಂಡಿರುತ್ತೇನೆ.

20. ನಂತರ ಆರೋಪಿಯನ್ನು ಕುರಿತು ಪಿರ್ಯಾದಿಗೆ ಸಂಬಂಧಿಸಿದ ಕಡತವನ್ನು ಹಾಜರು ಪಡಿಸಲು ಕೇಳಲಾಗಿ, ಆತ ಹಾಜರು ಪಡಿಸಿರುತ್ತಾನೆ. ಆತ ಒಟ್ಟು 32 ದಾಖಲಾತಿಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು

ಪಡೆದು ಅಮಾನತು ಪಡಿಸಿಕೊಂಡಿರುತ್ತೇನೆ. ನಂತರ ಸದರಿ ದಾಖಲಾತಿಗಳ ದೃಢೀಕೃತ ನಕಲುಗಳನ್ನು ಪಡೆದುಕೊಂಡು, ಮೂಲದಾಖಲಾತಿಗಳನ್ನು ಚಾಸಾ-4 ರವರಿಗೆ ಹಿಂದಿರುಗಿಸಿ ಸ್ವೀಕೃತಿಯನ್ನು ಪಡೆದಿರುತ್ತೇನೆ. ಸದರಿ ಸ್ವೀಕೃತಿಯನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ-19 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಸದರಿ ದಾಖಲಾತಿಗಳನ್ನು ಒಟ್ಟಾಗಿ ಈಗಾಗಲೇ ನಿಪಿ-14 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಸದರಿ ದಾಖಲಾತಿಗಳು ಪು.ಸಂ.160 ರಿಂದ 250 ರವರೆಗೆ ಇರುತ್ತವೆ. ಸದರಿ ಕಛೇರಿಯ ಹಾಜರಾತಿ ಪುಸ್ತಕವನ್ನು ಕೇಳಲಾಗಿ, ಅದನ್ನು ನಿರ್ವಹಣೆ ಮಾಡಿರುವುದಿಲ್ಲ ಎಂದು ಚಾಸಾ-4 ರವರು ತಿಳಿಸಿದರು. ಸದರಿ ಕಛೇರಿಗೆ ಅಳವಡಿಸಲಾದ ಸಿಸಿ ಕ್ಯಾಮೆರಾ ಬಗ್ಗೆ ಕೇಳಲಾಗಿ ಚಾಸಾ-4 ರವರು ಕಳೆದ 3 ದಿನಗಳಿಂದ ಅದು ಚಾಲ್ತಿಯಲ್ಲಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಆರೋಪಿಯನ್ನು ಕೇಳಲಾಗಿ ಆತ ಲಿಖಿತ ಸಮಾಜಾಯಿಷಿಯನ್ನು ನೀಡಿ, ಅದರಲ್ಲಿ ಪಿರ್ಯಾದುದಾರರು ನನಗೆ ಗೊತ್ತಿಲ್ಲದ ಹಾಗೆ ಆ ಹಣವನ್ನು ನನ್ನ ಜೇಬಿಗೆ ತುರುಕಿರುತ್ತಾರೆ ಎಂದು ತಿಳಿಸಿದ್ದು, ಅದನ್ನು ಪಿರ್ಯಾದುದಾರರು ಮತ್ತು ಚಾಸಾ-3 ರವರು ಅಲ್ಲಗಳೆದಿರುತ್ತಾರೆ. ಸದರಿ ಸಮಾಜಾಯಿಷಿಯನ್ನು ನಾನೀಗ ನೋಡುತ್ತಿದ್ದೇನೆ, ಅದನ್ನು ಈಗಾಗಲೇ ನಿಪಿ-16 ಎಂದು ಗುರುತು ಪಡಿಸಿಕೊಳ್ಳಲಾಗಿದೆ.

21. ನಂತರ ಆರೋಪಿಯನ್ನು ದಸ್ತಗಿರಿ ಮಾಡಿ ಸದರಿ ಮಾಹಿತಿಯನ್ನು ಚಾಸಾ-4 ರವರಿಗೆ ತಿಳಿಸಿರುತ್ತೇನೆ. ಸದರಿ ದಸ್ತಗಿರಿ ತಿಳುವಳಿಕೆ ಪತ್ರವನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ-20 ಎಂದು ಗುರುತು ಪಡಿಸಿಕೊಳ್ಳಲಾಗಿದೆ.

22. ಟ್ರಾಪ್ ಮಹಜರ್ ನಡವಳಿಕೆಗಳು ನಡೆಯುತ್ತಿದ್ದ ಕಾಲಕ್ಕೆ ಛಾಯಚಿತ್ರಗಳನ್ನು ತೆಗೆಯಲಾಯಿತು. ಅವುಗಳನ್ನು ನಾನೀಗ ನೋಡುತ್ತಿದ್ದೇನೆ. ಅವುಗಳನ್ನು ಈಗಾಗಲೇ ನಿಪಿ-8 ರಿಂದ 10 ಎಂದು ಗುರುತು ಪಡಿಸಿಕೊಳ್ಳಲಾಗಿದೆ.

23. ಸದರಿ ಪಂಚನಾಮೆಯನ್ನು ರಾತ್ರಿ 7.45 ರಿಂದ 11.30 ರವರೆಗೆ ಪಂಚರ ಸಮಕ್ಷಮ ಮಾಡಲಾಯಿತು. ಸದರಿ ಮಹಜರನ್ನು ಈಗಾಗಲೇ ನಿಪಿ-15 ಎಂದು ಗುರುತು ಪಡಿಸಿಕೊಳ್ಳಲಾಗಿದ್ದು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ-15(ಇ) ಎಂದು ಗುರುತು ಪಡಿಸಿಕೊಳ್ಳಲಾಯಿತು.

24. ಪಂಚನಾಮೆಯ ಕಾಲಕ್ಕೆ ಆರೋಪಿ ಕರ್ತವ್ಯದಲ್ಲಿದ್ದ ಕಛೇರಿಯ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಅದನ್ನು ನಾನೀಗ ನೋಡುತ್ತಿದ್ದೇನೆ. ಅದನ್ನು ನಿಪಿ–25 ಎಂತಲೂ ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ–25(ಎ) ಎಂತಲೂ ಗುರುತು ಪಡಿಸಿಕೊಳ್ಳಲಾಯಿತು.

25. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ. ಅದೇ ದಿನ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಲು ಕಳುಹಿಸಿಕೊಟ್ಟಿರುತ್ತೇನೆ.

26. ದಿಃ15.07.2017 ರಂದು ಚಾಸಾ–1 ರವರ ಮುಂದುವರೆದ ಹೇಳಿಕೆಯನ್ನು ದಾಖಲಿಸಿರುತ್ತೇನೆ. ಅದೇ ದಿನ ಚಾಸಾ–2, ಚಾಸಾ–3, ಚಾಸಾ–4, ಚಾಸಾ–5, ಚಾಸಾ–8, ಚಾಸಾ–9, ಚಾಸಾ–11, ಚಾಸಾ–12, ಚಾಸಾ–13 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ಖಡತವನ್ನು ಮುಂದಿನ ತನಿಖೆಗಾಗಿ ಚಾಸಾ–17 ರವರಿಗೆ ಹಸ್ತಾಂತರಿಸಿರುತ್ತೇನೆ.

**ಮುಂದುವರೆದ ಮುಖ್ಯವಿಚಾರಣೆಗಾಗಿ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮೈಸೂರು.